**ಕರ್ನಾಟಕ ವಿಧಾನ ಪರಿಷತ್ತು**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದಕುಮಾರ್ ಅರಳಿ ರವರು ನಿಯಮ-72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಹೇಳಿಕೆ.**

**ವಿಷಯ: ಅಕ್ರಮವಾಗಿ ಪಡೆದಿರುವ ಇಲಾಖಾ ಪರೀಕ್ಷೆಗಳ ಪ್ರಮಾಣ ಪತ್ರಗಳನ್ನು ಪರಿಗಣಿಸಿ ಪರೀಕ್ಷಾರ್ಥ ಅವಧಿ ಘೋಷಣೆಗೆ ಹಾಗೂ ಮುಂಬಡ್ತಿ ನೀಡುತ್ತಿರುವುದನ್ನು ಮುಚ್ಚಿ ಹಾಕಲು 142ನೇ ಅಧಿವೇಶನದ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:379, 380, 143 ಅಧಿವೇಶನದ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2238, 2239, 2240 ಹಾಗೂ 144ನೇ ಅಧಿವೇಶನದ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 458 ಇವುಗಳಿಗೆ ಉತ್ತರ ಹಾಗೂ ಇವುಗಳ ಪೂರಕ ದಾಖಲೆಗಳು ಇಲ್ಲಿಯವರೆಗೆ ಇಲಾಖೆಯು ಸದನಕ್ಕೆ ನೀಡದೇ ಇರುವ ವಿಚಾರದ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯಬಯಸುತ್ತೇನೆ.**

---

**ಉತ್ತರ:** ಕರ್ನಾಟಕ ವಿಧಾನ ಪರಿಷತ್ತಿನ 142ನೇ ಅಧಿವೇಶನದ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:379 ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿ, ಆಯ್ಕೆ ಪಟ್ಟಿ, ಜೇಷ್ಠತಾ ಪಟ್ಟಿ ಮತ್ತು ಪದನ್ನೋತಿಗೆ ಸಂಬಂಧಿಸಿರುತ್ತದೆ.

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 380 ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸೇವೆ, ಗ್ರಾಮ ಪಂಚಾಯತಿ ನೌಕರರ ಇಲಾಖಾ ಪರೀಕ್ಷೆಗೆ ಸಂಬಂಧಿಸಿರುತ್ತದೆ.

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2238 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಗುತ್ತಿಗೆ, ಒಪ್ಪಂದ ಕರಾರು ಆಧಾರದ ಮೇಲೆ ನೇಮಕಗೊಂಡು ಇಲಾಖಾ ಪರೀಕ್ಷೆ ಬರೆದಿರುವ ನೌಕರರಿಗೆ ಮತ್ತು ಪತ್ರಾಂಕಿತ ಹುದ್ದೆಗಳಿಗೆ ಮುಂಬಡ್ತಿ ನೀಡಿರುವುದಕ್ಕೆ ಸಂಬಂಧಿಸಿರುತ್ತದೆ.

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2239 ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತಾ ಪಟ್ಟಿ ಮತ್ತು ಮುಂಬಡ್ತಿಗೆ ಸಂಬಂಧಿಸಿರುತ್ತದೆ. ಸದರಿ ಪ್ರಶ್ನೆಗೆ ದಿನಾಂಕ:26-03-2021 ರಂದು ವಿಧಾನ ಪರಿಷತ್ತಿಗೆ ಈಗಾಗಲೇ ಉತ್ತರ ನೀಡಲಾಗಿದೆ. ಪ್ರತಿ ಅನುಬಂಧದಲ್ಲಿ ನೀಡಿದೆ.

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2240 ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಸಹಾಯಕ ನಿರ್ದೇಶಕರ ಸೇವಾ ಜೇಷ್ಠತೆ ಮತ್ತು ಗ್ರಾಮ ಪಂಚಾಯತಿ ನೌಕರರ ಇಲಾಖಾ ಪರೀಕ್ಷೆಗೆ ಸಂಬಂಧಿಸಿರುತ್ತದೆ.

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 458 ದಾಖಲಾಗಿರುವುದಿಲ್ಲ. ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1458 ದಾಖಲಾಗಿದ್ದು, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳಿಗೆ ಸಂಬಂಧಿಸಿದಂತೆ 2010 ರಿಂದ 2021 ರವರೆಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿ ಮಾಡಿರುವ ಆದೇಶದ ಪ್ರತಿಗಳು, ಪರೀಕ್ಷಾರ್ಥ ಅವಧಿ ಘೋಷಣೆ ಪ್ರತಿಗಳು, ಇಲಾಖಾ ಪರೀಕ್ಷೆ ಪ್ರಮಾಣ ಪತ್ರಗಳ ಪ್ರತಿಗಳು, ಜೇಷ್ಠತಾ ಪಟ್ಟಿ ಪ್ರತಿಗಳು, ನೇರ ನೇಮಕಾತಿ ಮತ್ತು ಬಡ್ತಿ ಕೋಟಾದಲ್ಲಿ ನೇಮಕವಾದ ನೌಕರರ ವಿವರಕ್ಕೆ ಸಂಬಂಧಿಸಿರುತ್ತದೆ.

ಮೇಲ್ಕಂಡ ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಎಲ್ಲಾ ಜಿಲ್ಲಾ ಪಂಚಾಯತಿಗಳಿಂದ ಮಾಹಿತಿ ಕ್ರೋಢೀಕರಣ ಮಾಡಿ ಸರ್ಕಾರಕ್ಕೆ ಸಲ್ಲಿಸುವಂತೆ ಆಯುಕ್ತರು, ಪಂಚಾಯತ್ ರಾಜ್ ರವರನ್ನು ಕೋರಲಾಗಿದ್ದು, ಮಾಹಿತಿ ಸ್ವೀಕೃತವಾದ ಕೂಡಲೇ ಕರ್ನಾಟಕ ವಿಧಾನ ಪರಿಷತ್ತಿಗೆ ಉತ್ತರವನ್ನು ಒದಗಿಸಲಾಗುವುದು.

**ಸಂಖ್ಯೆ: ಗ್ರಾಅಪ 77 ಗ್ರಾಪಂಅ 2022**

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಅನುಬಂಧ 1

<u>ಕರ್ನಾಟಕ ಸರ್ಕಾರ</u>

ಸಂ. ಗ್ರಾಅಪ 69 ಕೆ.ಎಸ್.ಎಸ್.2021(ಇ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:04.9.2021

<u>ಇವರಿಂದ:</u>

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬೆಂಗಳೂರು.

<u>ಇವರಿಗೆ:-</u>

ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ:- ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸುನೀಲ್ ಗೌಡ ಬಸನಗೌಡ ಪಾಟೀಲ್ ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:2239 ಕ್ಕೆ ಉತ್ತರ ನೀಡುವ ಬಗ್ಗೆ.

ಉಲ್ಲೇಖ:-ಎಲ್.ಸಿ. ಕ್ಯೂ:2239:143ನೇಮು:2021, ದಿ:17.3.2021

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸುನೀಲ್ ಗೌಡ ಬಸವನಗೌಡ ಪಾಟೀಲ್ ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:2239 ಕ್ಕೆ ಉತ್ತರ ವಿಧಾನ ಪರಿಷತ್ ಪ್ರಶ್ನೆ ಸಂಖ್ಯೆ:2239 ಕ್ಕೆ ಉತ್ತರಗಳನ್ನು (25 ಪ್ರತಿಗಳಲ್ಲಿ) ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

(ಬಾಲಪ್ಪ) 4/09/21

ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ ಮತ್ತು ಬಿ )
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಯನ್ನು:**

1. ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ, ಸಮನ್ವಯ ಶಾಖೆ.
2. ಹೆಚ್ಚುವರಿ ಪ್ರತಿ, ಶಾಖಾ ರಕ್ಷಾ ಕಡತ